‘ಏನ್ ವಿಷಯ ಮೇಡಂ? ಆ ಮನುಷ್ಯ ಯಾರು?’ ಗೋಮತಿ ಆಠ್ಯಾ ಕೇಳಿದರು. ಅವರು ಆಫೀಸ್ ಇನ್‌ಚಾರ್ಜ್ ಆಗಿದ್ದರು.

‘ನನ್ನ ಸಾಲಗಾರ. ಇವನು ಮನೆ ಖರೀದಿಸಲು ನನ್ನಿಂದ ಏಳು ಲಕ್ಷ ರೂಪಾಯಿಗಳನ್ನು ತಗೊಂಡಿದ್ದ’ ಎಂದೆ.

‘ಇಷ್ಟೊಂದು ಹಣ? ನೀವು ಕೊಡಬಾರದಿತ್ತು’.

‘ಹೌದು, ಈಗ ನನಗೂ ಕೊಡಬಾರದಿತ್ತು ಅಂತ ಅನ್ನಿಸುತ್ತಿದೆ. ನಮ್ಮ ಪರಿವಾರದ ಪರಿಚಯವಿತ್ತು. ಹೀಗಾಗಿ ನಂಬಿಕೆಯಿಂದ ಕೊಟ್ಟಿದ್ದೆ. ಆದ್ರೆ ಇವತ್ತು ನೋಡಿ, ನನ್ನ ಹಣವನ್ನು ವಾಪಸ್ ಕೇಳಿದರೆ, ನನ್ನ ಕ್ಯಾರೆಕ್ಟರ್‌ಗೆ ಕೆಸರೆರಚಿ ನನ್ನ ಬಾಯಿ ಮುಚ್ಚಿಸಲು ನೋಡ್ತಿದ್ದಾನೆ’.

ನಾನು ರಿತಿಕ್‌ನ ಸ್ವಭಾವದಿಂದ ಆಘಾತಕ್ಕೊಳಗಾಗಿದ್ದೆ. ನನಗೆ ಅವನ ಬಗ್ಗೆ ಅತೀವ ಸಿಟ್ಟು ಬರುತ್ತಿತ್ತು.

‘ಹಣ ಕೊಟ್ಟ ಬಗ್ಗೆ ನಿಮ್ಮ ಬಳಿ ಪತ್ರವಿದೆಯಾ?’ ಗೋಮತಿ ಆಠ್ಯಾ ಕೇಳಿದರು.

‘ಹೂಂ, ಇದೆಯಲ್ಲ! ಅದಕ್ಕೇ ಭಯದಿಂದ ಅಲೀತಿದ್ದಾನೆ. ಇಲ್ದಿದ್ರೆ ಇವನು ನನಗೆಂದೂ ಮುಖ ಸಹ ತೋರಿಸ್ತಿರಲಿಲ್ಲ’ ಎಂದೆ.

‘ನೀವು ಮಾಡಿದ್ದು ಸರಿಯಿತ್ತು’, ಗೋಮತಿ ಆಠ್ಯಾ ಪ್ರಶಂಸಿಸುತ್ತಾ ಹೇಳಿದರು.

‘ಗೋಮತಿಯವರೇ, ಎಲ್ಲವನ್ನು ಸರಿಯಾಗಿಯೇ ಮಾಡಿದ್ದೆ. ಆದರೆ ಮನುಷ್ಯನಿಗೆ ಎರಡೆರಡು ರೂಪಗಳಿರುತ್ತವೆ! ಎರಡನೆಯ ರೂಪ ಎದುರಾದಾಗ, ಎಲ್ಲವೂ ಅವ್ಯವಸ್ಥೆಯಾಗುತ್ತದೆ.’

‘ನೀವು ಅವನಿಗೆ ಸರಿಯಾಗಿ ಗದರಿದಿರಿ’, ಗೋಮತಿ ಆಠ್ಯಾರ ಎದುರು ಕೂತಿದ್ದ ಸ್ಟೆನೋ ಹೇಳಿದಳು.



ನಾನು ಆ ಅಪ್ರಿಯ ವಿಷಯದ ಬಗ್ಗೆ ಇನ್ನು ಹೆಚ್ಚು ಮಾತನಾಡುವ ಅವಕಾಶವನ್ನು ಕೊಡಲು ಬಯಸುತ್ತಿರಲಿಲ್ಲ. ಹೀಗಾಗಿ ಕೂಡಲೇ ನನ್ನ ಕಾರ್ಯದಲ್ಲಿ ಮಗ್ನಳಾದಂತೆ ನಟಿಸಿದೆ. ಆದರೆ ನನ್ನ ಮನಸ್ಸು ಕೆಲಸದಲ್ಲಿ ತೊಡಗುತ್ತಲೇ ಇರಲಿಲ್ಲ. ನಾನು ಕೀರ್ತಿಯೊಂದಿಗೆ ಮಾತನಾಡಲು ಬಯಸುತ್ತಿದ್ದೆ. ಇದು ಕಚೇರಿಯಲ್ಲಿ ಕೂತು ಸಾಧ್ಯವಿರಲಿಲ್ಲ. ಏಕೆಂದರೆ ಎಲ್ಲರ ಕಿವಿಗಳು ಮತ್ತೆ ನಿಮಿರಿಕೊಳ್ಳುತ್ತವೆ. ಸಂಜೆ ಮನೆಗೆ ಬಂದವಳೇ ಮೊದಲು ಕೀರ್ತಿಗೆ ಫೋನ್ ಮಾಡಿ, ಅವಳಿಗೆ ಎಲ್ಲಾ ಘಟನೆಯನ್ನು ಹೇಳಿದೆ.

‘ಬ್ರೇವ್ ಗರ್ಲ್! ನೀನು ಸರಿಯಾಗಿ ಉತ್ತರ ಕೊಟ್ಟಿದ್ದೀಯ! ಒಂದು ವೇಳೆ ನಾನು ಸದಾಶಿವರಿಗೆ ಫೋನ್ ಮಾಡಿ, ‘ರಿತಿಕ್ ನಿಮ್ಮ ಹೆಸರನ್ನು ಹೇಳುತ್ತಿದ್ದ’ ಎಂದರೆ, ಸದಾಶಿವ್ ಕೂಡಲೇ ಅವನನ್ನು ಹಿಡಿದು ಬೆಂಡೆತ್ತುತ್ತಿದ್ದರು’, ಎಂದಳು ಕೀರ್ತಿ.

‘ಕೀರ್ತಿ, ನನಗೆ ವಿಚಿತ್ರ ಎಂದು ಅನ್ನಿಸುತ್ತಿದೆ’.

‘ಏಕೆ?’

‘ಏಳು ಲಕ್ಷ ರೂಪಾಯಿ ದೊಡ್ಡ ಮೊತ್ತದ ಹಣ. ಅವನು ಹತ್ತುಐದು ಸಾವಿರದಲ್ಲಿ ನನ್ನನ್ನೇ ಮುಗಿಸುವ ಮನಸ್ಸು ಮಾಡಿದರೆ?’ ನಾನು ನನ್ನ ಮನಸ್ಸಿನಲ್ಲಿದ್ದ ಭಯವನ್ನು ವ್ಯಕ್ತಪಡಿಸಿದೆ. ನಾನು ಸಾಯಲು ಹೆದರುತ್ತಿರಲಿಲ್ಲ, ನಾಳೆ ಸಾಯುವ ಬದಲು ಇವತ್ತೇ ಸಾಯುತ್ತಿದ್ದೆ. ಆದರೆ ನಾನು ಸತ್ತರೆ ಅಮ್ಮ ಒಂಟಿಯಾಗುತ್ತಾರೆ ಎಂದು ಯೋಚಿಸಿ ವಿಚಿತ್ರ ಅನುಭವವಾಗುತ್ತಿತ್ತು.

‘ನೋಡು, ಈ ವ್ಯರ್ಥದ ವಿಷಯಗಳನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ಯಾರೂ ನಿನಗೇನೂ ಮಾಡಲಾರರು. ನೀನು ಸದಾಶಿವರನ್ನು ನಿನ್ನ ಭಾವ ಮಾತ್ರವಲ್ಲ, ನಿನ್ನ ಅಣ್ಣ ಎಂದು ತಿಳಿ. ಅವರಿದ್ದಂತೆ ನಿನ್ನ ಬಗ್ಗೆ ಯಾರೂ ಯೋಚಿಸಲೂ ಸಾಧ್ಯವಿಲ್ಲ. ಧೈರ್ಯದಿಂದಿರು! ನೋಡ್ತಿರು, ಒಂದೇ ವಾರದಲ್ಲಿ ರಿತಿಕ್ ನಿನ್ನ ಉಳಿದ ಹಣವನ್ನು ಚುಕ್ತಾ ಮಾಡಿ ಕೈತೊಳೆದುಕೊಳ್ತಾನೆ. ನಂತರ ಅವನೆಂದೂ ನಿನಗೆ ತನ್ನ ಮುಖವನ್ನು ತೋರಿಸಲ್ಲ... ನನ್ನನ್ನು ನಂಬು, ಅದಕ್ಕೂ ಮೊದಲು ನಿನ್ನನ್ನು ನೀನು ನಂಬು’, ಕೀರ್ತಿ ತುಂಬಾ ಹೊತ್ತು ನನಗೆ ತಿಳಿ ಹೇಳುತ್ತಿದ್ದಳು, ನನ್ನ ಅಮ್ಮನಂತೆಯೇ!

‘ನೀನು ಹೂಂ ಅಂದರೆ ನಾನು ಕೆಲವು ದಿನ ಬಂದು ನಿನ್ನ ಜೊತೆಗಿರ್ತೀನಿ’, ಕೀರ್ತಿ ಕೇಳಿದಳು.

‘ಬೇಡ, ನಾನೊಬ್ಬೇ ಎದುರಿಸಲು ಬಿಡು. ನೀನು ನನಗೆ ಸಾಕಷ್ಟು ಧೈರ್ಯ ಹೇಳಿದ್ದೀಯ, ಇದರಿಂದ ಈಗ ನಿಶ್ಚಿಂತಳಾದೆ’ ಎಂದೆ.

‘ಒಂದು ವೇಳೆ ರಿತಿಕ್‌ನಲ್ಲಿ ನನಗೆ ತೊಂದ್ರೆ ಕೊಡುವಂಥ ಧೈರ್ಯವಿದ್ದಿದ್ದರೆ, ಅವನು ಒಂದು ಲಕ್ಷ ರೂಪಾಯಿಗಳ ಚೆಕ್‌ನೊಂದಿಗೆ ನನ್ನ ಬಳಿಗೆ ಬರುತ್ತಿರಲಿಲ್ಲ. ತಾನು ಬಂದಿದ್ದರಿಂದ ನಾನು ಹೆದರುತ್ತೇನೆ ಎಂದು ಅವನು ಯೋಚಿಸಿರಬೇಕು. ಆದರೆ ಹೀಗಾಗಲಿಲ್ಲ. ನಾನು ಕೆಟ್ಟ ಸಂದೇಹಗಳಿಂದ ಆವರಿಸಿದ್ದೆ. ಅವನಿಗೆ ನನ್ನ ಮನಸ್ಸು ಅರ್ಥವಾಗುತ್ತೆ, ಏಕೆಂದರೆ ನಾವು ಐದು ವರ್ಷಗಳ ಕಾಲ ಜೊತೆಯಲ್ಲಿ, ಒಂದೇ ಮನೆಯಲ್ಲಿ, ಒಂದೇ ಹಾಸಿಗೆಯಲ್ಲಿದ್ದೆವು’.

ಕೀರ್ತಿಯೊಂದಿಗೆ ಮಾತನಾಡಿದ ನಂತರ ನನಗೆ ವಿಶಾಲನ ಕೊರತೆ ತೀವ್ರವಾಗಿ ಕಾಡಿತು. ಅವನು ಬರುವುದನ್ನು ನಿರೀಕ್ಷಿಸಲೇ? ಒಂದು ವೇಳೆ ಅವನು ಬರದಿದ್ದರೆ? ಅವನು ನಿಯಮಿತವಾಗಿ ನಿತ್ಯ ಬರುತ್ತಿರಲಿಲ್ಲ. ಒಮ್ಮೊಮ್ಮೆ ನಿರಂತರವಾಗಿ ಮೂರು ದಿನಗಳು ಬಂದರೆ, ಇನ್ನೊಮ್ಮೆ ಮೂರು ದಿನಗಳವರೆಗೆ ಬರುತ್ತಿರಲಿಲ್ಲ. ಅವನು ಇಂದೂ ಸಹ ಬಂದಿರಲಿಲ್ಲ. ಹೀಗಾಗಿ ಇವತ್ತು ಬರುವ ಅವಶ್ಯಕತೆಯಿಲ್ಲ. ಆದರೆ ಅವನು ಬಂದರೆ, ನನಗೆ ಉಸಿರಾಡಲು ಅನುಕೂಲವಾಗುತ್ತದೆ. ಋಷಭ್ ನಿತ್ಯ ಬರುತ್ತಿದ್ದ. ಪಾರಸ್ಪರಿಕ ಸಂಬಂಧಗಳಲ್ಲಿ ಸ್ವಲ್ಪ ‘ಸ್ಪೇಸ್’ ಇರಲೇಬೇಕಾಗುತ್ತದೆ, ಇಲ್ಲದಿದ್ದಲ್ಲಿ ಸಂಬಂಧಗಳಲ್ಲಿ ಅಸ್ಥಿರತೆ ಬರುತ್ತದೆ. ನಿಂತ ನೀರಿನಂತೆ, ಅದರಲ್ಲೂ ಕೊಳಕು ಹುಟ್ಟುತ್ತದೆ. ಅದು ಕಾಯಿಲೆಗಳಿಗೆ ಕಾರಣವಾಗುತ್ತದೆ.

ನಾನು ವಿಶಾಲ್‌ಗೆ ಫೋನ್ ಮಾಡಬೇಕು. ನೀನು ಬರುತ್ತಿರುವೆಯೋ, ಇಲ್ಲವೋ ಎಂದು ಅವನನ್ನು ಪ್ರಶ್ನಿಸುವುದಿಲ್ಲ. ಅವನೊಂದಿಗೆ ಮಾತನಾಡುವುದರಿಂದಲೇ ಅವನು ಬರುತ್ತಿದ್ದಾನೋ ಅಥವಾ ಇಲ್ಲವೋ ಎಂಬುದು ತಿಳಿಯುತ್ತದೆ. ನನಗೆ ನನ್ನ ಈ ಯೋಚನೆ ಇಷ್ಟವಾಯಿತು.

‘ನೀವು ಎಲ್ಲಿದ್ದೀರ?’ ವಿಶಾಲ್‌ಗೆ ಫೋನ್ ಮಾಡಿದೆ’.

‘ಈಗ ಬ್ಯಾಂಕಿನಲ್ಲಿದ್ದೇನೆ. ಏಕೆ?’

‘ಹೀಗೇ ಕೇಳಿದೆ’.

‘ನೀವು ಮನೆಗೆ ಬಂದಿರಬೇಕು’

‘ಹೌದು’

‘ನಿಮಗೆಲ್ಲಾ ಐದೂವರೆಗೆ ಕಚೇರಿಯಿಂದ ಬಿಡುವು ಸಿಗುತ್ತೆ, ಆದ್ರೆ ನಮಗೆ ಆ ಅದೃಷ್ಟವಿಲ್ಲ. ನಿನ್ನೆ ಏಳು ಗಂಟೆಯಾಗಿತ್ತು, ಇವತ್ತು ಸಹ ಏಳು ಏಳೂವರೆ ಆಗಬಹುದು’, ಅವನ ಧ್ವನಿಯಿಂದ ಅವನು ಬಿಜಿಯಾಗಿದ್ದಾನೆಂದು ತೋರುತ್ತಿತ್ತು.

‘ನೀವೀಗ ಬಿಜಿಯಾಗಿದ್ದೀರ, ಆಮೇಲೆ ಮಾತಾಡ್ತೀನಿ’ ಎಂದೆ.

‘ನಾನೇ ಫೋನ್ ಮಾಡ್ತೀನಿ’ ಎಂದ ವಿಶಾಲ್. ನಾನು ಫೋನ್ ಆಫ್ ಮಾಡಿದೆ. ನಾನು ಕಿಚಡಿ ಮಾಡಲು ನಿರ್ಧರಿಸಿದೆ. ರೊಟ್ಟಿ ಮಾಡಲು ಅಥವಾ ಬ್ರೆಡ್ ತಿನ್ನಲು ಮನಸ್ಸಾಗುತ್ತಿರಲಿಲ್ಲ. ಕಿಚಡಿ ಮಾಡುವಾಗ ವಿಶಾಲನ ಫೋನನ್ನು ನಿರೀಕ್ಷಿಸುತ್ತಿದ್ದೆ. ಕಿಚಡಿ ಸಿದ್ಧವಾದರೂ ವಿಶಾಲನ ಫೋನ್ ಬರಲಿಲ್ಲ. ಅವನು ಕೆಲಸದ ಒತ್ತಡದಲ್ಲಿ ಫೋನ್ ಮಾಡುವುದನ್ನು ಮರೆತಿರಬೇಕು ಎಂದು ಯೋಚಿಸಿದೆ. ಎಂಟು ಗಂಟೆಯಾಯಿತು. ಕಡೆಗೆ ಎಂಟೂವರೆ ಸಹ ಆಯಿತು. ನಾನು ನನ್ನ ಪೋರ್ಟಬಲ್ ಟಿ.ವಿ. ಚಾಲನೆ ಮಾಡಿದೆ. ರಿಮೋಟ್‌ನಿಂದ ಚಾನಲ್ ಹುಡುಕಲಾರಂಭಿಸಿದೆ. ಸುದ್ದಿಗಳಲ್ಲಿ ವಿಶೇಷವೇನೂ ಇರಲಿಲ್ಲ. ಲೋಕಪಾಲ್ ಬಿಲ್ ಬಗ್ಗೆ ಚರ್ಚೆ ನಡೆಯುತ್ತಿತ್ತು. ಯಾವುದೋ ಚಾನಲ್‌ನಲ್ಲಿ ಲಾಫ್ಟರ್ ಶೋ ನಡೆಯುತ್ತಿತ್ತು, ಇನ್ಯಾವುದೋ ಚಾನಲ್‌ನಲ್ಲಿ